

ಭಕ್ತ ಸಾಗರದಲ್ಲಿ
ಪುರಿ ಜಗನ್ನಾಥ ಸನ್ನಿಧಿ



ದೆಹಲಿಯಿಂದ ಕಾಶಿ ತಲುಪಿದಾಗ ಬೆಳಗಿನ 6 ಗಂಟೆ ಆಗಿತ್ತು. ರೈಲು ನಿಲ್ದಾಣದಿಂದ ಹೊರ ಬರುತ್ತಿರುವಾಗಲೇ ಎದುರಾದ ಉದ್ದನೆಯ, ತೆಳು ದೇಹದ ಯುವ ಆಟೊ ಚಾಲಕ ಸಂಜೆ ನಾಲ್ಕು ಗಂಟೆಯವರೆಗೆ 100 ರೂಪಾಯಿ ಬಾಡಿಗೆಗೆ ವ್ಯಾಪಾರ ಕುದುರಿಸಿ ನಾವು ನಾಲ್ವರನ್ನೂ ಹತ್ತಿಸಿಕೊಂಡ. ಅಪ್ಪಾಜಿ, ಅಮ್ಮ ಹೇಗೂ ಗಂಗೆಯಲ್ಲಿ ಸ್ನಾನ ಮಾಡುವ ನಿರ್ಧಾರ ಮಾಡಿದ್ದರಿಂದ ಸೀದಾ ನದಿ ತೀರಕ್ಕೆ ಹೋದೆವು.

ಆಗ ಗಂಗೆಯ ಮಲಿನತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸದ್ದು, ಸುದ್ದಿ ಮಾಡುತ್ತಿತ್ತು. ಆಗಿನ 'ಗಂಗಾ ಆ್ಯಕ್ಷನ್ ಪ್ಲಾನ್' ಗಂಗೆಯನ್ನು ಶುದ್ಧಗೊಳಿಸುವ ಪಣ ತೊಟ್ಟಿತ್ತು. ಕೈಗಾರಿಕಾ ತ್ಯಾಜ್ಯ ಅದರಲ್ಲೂ ಕಾನ್ಪುರದ ಚರ್ಮೋದ್ಯಮದಿಂದ ಸೇರುತ್ತಿದ್ದ ಕಲುಷಿತ ನೀರು, ಅರ್ಧ ಬೆಂದ ಶವಗಳು, ಶವ ದಹನದಿಂದ ಆಗುವ ಬೂದಿ ಹೀಗೆ ಸುಮಾರು ಒಂದು ಬಿಲಿಯನ್ ಗ್ಯಾಲನ್‌ನಷ್ಟು ತ್ಯಾಜ್ಯ ಗಂಗೆಯ ಒಡಲಿಗೆ ಪ್ರತಿದಿನ ಆಗ ಸೇರುತ್ತಿತ್ತು! ಇದರಿಂದಾಗಿ ಗಂಗೆ ಪ್ರಪಂಚದ 10 ಅತ್ಯಂತ ಮಲಿನ ನದಿಗಳಲ್ಲಿ ಒಂದಾಗಿತ್ತು.

ಅಂದರೆ ದೇವನದಿ ಆಗ ತನ್ನಲ್ಲಿ ಮುಳುಗೇಳುವ ಭಕ್ತರ ಮಲಿನ ದೇಹಗಳನ್ನು ತೊಳೆದು, ಬೇರೆ ಬೇರೆ ಘಾಟ್‌ಗಳಲ್ಲಿ ಸಂಸ್ಕಾರದ ನಂತರ ನೀರಿಗೆ ಬಿಟ್ಟ ಅರೆಬೆಂದ ಶವಗಳನ್ನು, ಶವಸುಟ್ಟು ಉಳಿದ ಬೂದಿಯನ್ನು ಒಳಗಿಳಿಸಿಕೊಳ್ಳುವ ಮೂಲಕ ಸ್ವರ್ಗಕ್ಕೆ ಸೇರಿಸುವ ಹೊಣೆಯನ್ನು ಹೊತ್ತಿದ್ದಳು. ಜೊತೆಗೆ ಅಭಿವೃದ್ಧಿಯ ಉಪ ಉತ್ಪನ್ನವಾದ ಮಲಿನ ನೀರನ್ನು ಕೂಡಿಕೊಂಡು ಹರಿಯುವುದರ ಮೂಲಕ ಮುಂದುವರೆದ ಜನರ ಜೀವನವನ್ನು ಹಸನು ಮಾಡುವ ಗುರುತರ ಹೊಣೆಯನ್ನು ಹೊತ್ತಿದ್ದಳು. ಸಮುದ್ರದಂತೆ ವಿಶಾಲವಾಗಿ ಮೈದುಂಬಿ ಹರಿಯುವ ಅಂಥ ಗಂಗೆಯ ಪಕ್ಕದಲ್ಲಿ ನಿಂತಾಗ ಬಗ್ಗಡವಾಗಿದ್ದ, ಅಶುಭ್ರತೆಯಿಂದ ಬಣ್ಣಗೆಟ್ಟಿದ್ದ ನೀರನ್ನು ಕಂಡು ದುಃಖವಾಯಿತು.

ನಮ್ಮ ಊರಿನ ಚಿಕ್ಕ ಕೇರಿಗಳಂಥ ಇಕ್ಕಟ್ಟು ಓಣಿಗಳನ್ನು ದಾಟಿ ವಿಶ್ವನಾಥನ ಸನ್ನಿಧಿಗೆ ಬಂದಾಗ ಬೆಳಗಿನ ಎಂಟು ಗಂಟೆಯಾಗಿದ್ದರೂ ಈಗಿನಂತೆ ಜನಜಂಗುಳಿಯೇನೂ ಆಗ ಇರಲಿಲ್ಲ. ಅರ್ಚಕರು ನಮ್ಮೆಲ್ಲರ ಕೈಯಲ್ಲೂ ಅಭಿಷೇಕ ಮಾಡಿಸಿ, ಸ್ಪರ್ಶ ಮಾಡಿಸಿ, ನಮ್ಮೆಲ್ಲರ ಕತ್ತಿಗೂ ಆಶೀರ್ವಾದ ರೂಪದಲ್ಲಿ ದೇವರ ಮೇಲಿನ ಹಾರಗಳನ್ನು ಹಾಕಿ ನಮ್ಮಿಂದ ಯಾವುದೇ ಅಪೇಕ್ಷೆ ಇರದೇ ಹರಸಿ ಕಳುಹಿಸಿದ್ದರು. ಕಾಶಿ ವಿಶ್ವನಾಥನ ದರ್ಶನ ಇಷ್ಟು ನಿರಾಯಾಸವಾಗಿ ಆದದ್ದರಿಂದ ಅಮ್ಮ, ಅಪ್ಪಾಜಿಯ ಮುಖದ ಮೇಲೆ ಮೂಡಿದ್ದ ಸಂತೃಪ್ತ ಭಾವ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಆ ಧನ್ಯತೆಯಲ್ಲೇ ನಂತರ ಗಂಗೆಯ ಮೇಲೆ ದೋಣಿ ಸವಾರಿ ಮಾಡಿದ್ದೆವು.

ಇದಾಗಿ ಮೂರು ದಶಕಗಳ ನಂತರ ಮಧ್ಯಪ್ರದೇಶದ ಉಜ್ಜಯಿನಿಯ ಮಹಾಕಾಲೇಶ್ವರ ತಲುಪಿದ ಹಿಂದಿನ ವಾರ ದೇವಾಲಯದ ಪ್ರಧಾನ ಅರ್ಚಕರೂ ಸೇರಿದಂತೆ ಹನ್ನೊಂದು ಮಂದಿಯನ್ನು ಭ್ರಷ್ಟಾಚಾರ ಮಾಡಿದ ಆರೋಪದ ಮೇಲೆ ಬಂಧಿಸಲಾಗಿತ್ತು! ಯಾವ್ಯಾವುದನ್ನೋ ಬ್ರೇಕಿಂಗ್ ನ್ಯೂಸ್ ಮಾಡುವ ಮಾಧ್ಯಮಗಳಲ್ಲಿ ಇದು ಸುದ್ದಿಯಾಗಿರಲೇ ಇಲ್ಲ! ಅಲ್ಲಿಗೆ ಹೊರಡುವ ದಿನದವರೆಗೂ ದರ್ಶನದ ವ್ಯವಸ್ಥೆ ಸಾಧ್ಯವಾಗದ ಕಾರಣ ಅಲ್ಲಿನ ನನ್ನ ಸಹೋದ್ಯೋಗಿಯೊಬ್ಬರು ಆ ಬಗ್ಗೆ ಗಾಬರಿಯಿಂದ ತಿಳಿಸಿದ್ದರು. ಕೆಲ ತಿಂಗಳ ಅಂತರದಲ್ಲಿ ಜಾರ್ಖಂಡ್ ರಾಜ್ಯದ ವೈದ್ಯನಾಥಕ್ಕೆ ಹೋದಾಗ ಪೂಜೆಗಾಗಿ ಅಲ್ಲಿಯ ನೂಕು ನುಗ್ಗಲು, ತಳ್ಳಾಟ, ಶಿವಲಿಂಗದ ಪೀಠದ ಅಕ್ಕಪಕ್ಕದಲ್ಲಿ ಕುಳಿತು 'ಇಂದು ಮೊದಲ 500 ನೋಟನ್ನು ಇಲ್ಲಿ ಯಾರಿಡುತ್ತಾರೆ?' ಎಂದು ದಕ್ಷಿಣೆಗಾಗಿ ಆಗ್ರಹಿಸುವ, ಇಡದಿದ್ದರೆ ಅವರ ಮೇಲೆ ಹರಿಹಾಯುವ ಅರ್ಚಕರನ್ನು ಕಂಡು ದಿಗಿಲಾಗಿತ್ತು. ಅಲ್ಲಿ ಭಕ್ತಿ ಒಳಬರುವ ಭಕ್ತನಿಗೆ ಮಾತ್ರ. ಒಳಗಿರುವ ಅರ್ಚಕನಿಗೆ ಅಲ್ಲ! ಇದು ಮೂರು ದಶಕಗಳಲ್ಲಿ ಬದಲಾದ ಸಾಮಾಜಿಕ, ಆರ್ಥಿಕ, ಧಾರ್ಮಿಕ ವ್ಯವಸ್ಥೆಯ ರೂಪಕವಾಗಿಯೇ ನನಗೆ ಕಾಣಿಸಿತು.

ಭಾರತದಲ್ಲಿ ಧಾರ್ಮಿಕ ಪ್ರವಾಸಕ್ಕೆ ನಾನು ಕಾಶಿಗೆ ಹೋದ ಸಂದರ್ಭದಲ್ಲಿ 'ಯಾತ್ರೆ' ಎಂಬ ಹೆಸರಿತ್ತು. ಅದು ಭಕ್ತಿಯ ಪರಾಕಾಷ್ಠೆಯನ್ನು ಸೂಚಿಸುವ ಪದ. ಯಾತ್ರೆಗಳು ಆಗ ಬಹಳ ತ್ರಾಸದಾಯಕವಾಗಿರುತ್ತಿದ್ದವು. ಬಹುತೇಕರು ರೈಲಿನಲ್ಲಿ 2–3 ದಿನಗಳ ದೀರ್ಘ ಪ್ರಯಾಣವನ್ನು ಮಾಡಿಹೋಗಬೇಕಿತ್ತು. ವಿಮಾನ ಹಾರಾಟ ಉಳ್ಳವರಿಗೆ ಅಂದರೆ ಆರ್ಥಿಕ ಬಲಾಢ್ಯರಿಗೆ ಮಾತ್ರ ಎಂಬಂತಿದ್ದ ಕಾಲವದು. ನಂತರದ ಒಂದುಒಂದೂವರೆ ದಶಕ ಈ ದೇಶದಲ್ಲಿ ಸಾರಿಗೆ, ಸಾಗಾಟ ವ್ಯವಸ್ಥೆಯಲ್ಲಿ ಅತ್ಯಂತ ವೇಗಗತಿಯ ಬದಲಾವಣೆಗಳನ್ನು ಕಂಡಿತು. ಆರ್ಥಿಕ ಉದಾರೀಕರಣದಿಂದಾಗಿ ಪರರಾಷ್ಟ್ರಗಳು ನೆರೆಮನೆಗಳಾದವು. ಶೈಕ್ಷಣಿಕ ಅಭಿವೃದ್ಧಿ ಹಾಗೂ ಉನ್ನತ ಶಿಕ್ಷಣಕ್ಕೆ ಅಪಾರ ಮನ್ನಣೆ ಸಿಕ್ಕ ಕಾರಣ